ದಿನಾಂಕ: 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಸ್.ಬಿ.ಎನ್. ಪ್ರತಿವಾದಿ 1 ರಿಂದ 4 ರವರ ಪರ ವಕೀಲರಿಂದಃ**

ನಾನು 3ನೇ ತರಗತಿವರೆಗು ಓದಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರನಲ್ಲಿ ಹೇಳಿರುವ ವಿಷಯಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ 30 ವರ್ಷಗಳಾಗಿವೆ. ನನ್ನ ಗಂಡನ ಊರು ಮರಡೀಮಠ ಎಂದರೆ ಸರಿ. ನನ್ನ ಮದುವೆಯಾದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲಿಯೇ ಇದ್ದೇನೆ ಎಂದರೆ ಸರಿ. 4ನೇ ಪ್ರತಿವಾದಿ ನನ್ನ ತಂಗಿ.

2. ನನ್ನ ತಂದೆ ನನ್ನ ತಾಯಿ ತೀರಿಕೊಂಡ ನಂತರ 1ನೇ ಪ್ರತಿವಾದಿಯನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. 2 ಮತ್ತು 3ನೇ ಪ್ರತಿವಾದಿಯರು 1ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ತಾವೇ ವರದಿ ಕೊಟ್ಟು ತಮ್ಮ ಹೆಸರ ಹಚ್ಚಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಅರ್ಜಿ ಕೊಟ್ಟ ಪ್ರಕಾರ ಹಕ್ಕು ದಾಖಲೆ ನಂ.1971 ಮಂಜೂರಾಗಿದೆ ಎಂದರೆ ಸರಿ. ಡೈರಿ ನಂ.1971 ನ್ನು ಪ್ರಶ್ನಿಸಿ ನಾವು ಯಾವುದೇ ಅಪೀಲು ಸಲ್ಲಿಸಿಲ್ಲ ಹಾಗೂ ಅಡಚಣೆ ಇರಲಿಲ್ಲ.

3. ದಾವಾ ಆಸ್ತಿಗಳಲ್ಲಿ 3ನೇ ಪ್ರತಿವಾದಿಯ ಹೆಸರು ಹಚ್ಚುವಾಗ ನಾವು ಯಾವುದೇ ತಕರಾರು ಕೊಟ್ಟಿಲ್ಲ. ತಕರಾರು ಕೊಡಲು ನಮಗೆ ಯಾವುದೇ ಅಡಚಣೆ ಇರಲಿಲ್ಲ. 4ನೇ ಪ್ರತಿವಾದಿ 3ನೇ ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿರುತ್ತಾರೆ ಎಂದರೆ ಸರಿ.

4. ದಾವಾ ಜಮೀನುಗಳ ಪಟ್ಟಿ ಯಾವ ದಿಕ್ಕಿನಲ್ಲಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ 116 ಮತ್ತು 136 ಇರುತ್ತದೆ ಹಾಗೂ ಮನೆ ನಂ.1443 ಇರುತ್ತದೆ. ನನ್ನ ತಂದೆಗೆ ಇಬ್ಬರು ಸಹೋದರಿಯರು ಎಂದರೆ ಸರಿ. ಅವರುಗಳು ದುಂಡವ್ವ ಮತ್ತು ಬಾಗವ್ವ ಎಂದರೆ ಸರಿ. ಬಾಗವ್ವ ಈಗ ತೀರಿಕೊಂಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ದಾವಾ ಆಸ್ತಿ ಪ್ರತಿವಾದಿ 3 ರವರ ಹೆಸರಿಗೆ ವರ್ಗಾವಣೆಗೊಂಡಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನಾವೂ ಸಹ ಕಬ್ಜೆಯಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ಈ ಹೊತ್ತಿನವರೆಗು ದಾವಾ ಆಸ್ತಿಗಳಲ್ಲಿ 3ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದು ಅವರೇ ಕಂದಾಯವನ್ನು ಸಹ ಪಾವತಿ ಮಾಡುತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಗೆ ಕಂದಾಯ ಪಾವತಿ ಮಾಡಿದಬಗ್ಗೆ ದಾಖಲೆಗಳು ಇರುವುದಿಲ್ಲ.

5. ಮನೆ ಆಸ್ತಿ ನಂ.1443ನ್ನು 3ನೇ ಪ್ರತಿವಾದಿ ತಮ್ಮ ಸ್ವಂತ ದುಡಿಮೆಯಿಂದ ಹಕ್ಕು ಬಿಟ್ಟು ಕೊಟ್ಟ ಪತ್ರದ ಪ್ರಕಾರ ಮಹಾದೇವಿ ನಾವಿ ಇವರಿಂದ ಖರೀದಿ ಮಾಡಿದ್ದಾರೆ ಎಂದರೆ ಹೊಲಗಳದಿಂದ ಬಂದ ಆದಾಯದಿಂದ

ಖರೀದಿ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ಜಮೀನಿನಿಂದ ಬಂದ ಆದಾಯದಿಂದ ಜಿ.ಪಿ.ಸಿ ನಂ.1443 ಖರೀದಿ ಮಾಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ.

6. 3ನೇ ಪ್ರತಿವಾದಿ ತಮ್ಮ ಖರ್ಚಿನಿಂದ ಆರ್.ಸಿ.ಸಿ ಮನೆಗಳನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಆರ್.ಸಿ.ಸಿ ಮನೆಯಲ್ಲಿ 3ನೇ ಪ್ರತಿವಾದಿ ಹಾಗೂ ಅವರ ತಾಯಿ ಕೂಡಿ ಇದ್ದಾರೆ ಎಂದರೆ ಸರಿ. ಸದರಿ ಮನೆಯ ಕಂದಾಯವನ್ನು 3ನೇ ಪ್ರತಿವಾದಿಯೇ ಪಾವತಿಸುತ್ತಾರೆ ಎಂದರೆ ಸರಿ.

7. ದಾವಾ ಆಸ್ತಿಗಳು ನಮ್ಮ ಹಿರಿಯರ ಆಸ್ತಿಗಳು ಎಂದು ತೋರಿಸಲು ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ. ನಾನು ದಾವಾ ಮನೆ ಆಸ್ತಿಯ ಉತಾರವನ್ನು ಹಾಜರ ಮಾಡಿದ್ದೇನೆ. ಸದರಿ ಉತಾರದಲ್ಲಿ 3ನೇ ಪ್ರತಿವಾದಿಯ ಹೆಸರು ಇದೆ. ಆರ್.ಸಿ.ಸಿ. ಮನೆ 3ನೇ ಪ್ರತಿವಾದಿಯ ಸ್ವಂತ ಮನೆ ಎಂದರೆ ಹೊಲದಲ್ಲಿ ದುಡಿದು ಬಂದ ದುಡ್ಡಿನಿಂದ ಕಟ್ಟಿದ್ದಾರೆ ಎಂದು ಹೇಳುತ್ತಾರೆ. 3ನೇ ಪ್ರತಿವಾದಿ ತಮ್ಮ ಸ್ವಸಂಪಾದನೆಯಿಂದ ಕಟ್ಟಿದ ಮನೆಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಮನೆ ನಂ.1443 3ನೆ ಪ್ರತಿವಾದಿ ತನ್ನ ಸ್ವಂತ ಸಂಪಾದನೆಯಿಂದ ಕಟ್ಟಿದ ಮನೆ ಇದ್ದು ಅದರಲ್ಲಿ ತಮಗೆ ಏನು ಪಾಲು ಬೇಡ ಎಂದು ಹೇಳಿದ್ದಾರೆ ಎಂದರೆ ಸರಿ. ನಮ್ಮ ತಂದೆ ನನ್ನ ಮದುವೆಗೆ ಸಾಕಷ್ಟು ಹಣ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

8. 3ನೇ ಪ್ರತಿವಾದಿ ದಾವಾ ಆಸ್ತಿಗಳ ಮೇಲೆ ಸಿಂಡಿಕೇಟ ಬ್ಯಾಂಕನಲ್ಲಿ ಮತ್ತು ಸೊಸೈಟಿಯಲ್ಲಿ ಸಾಲ ತೆಗೆದಿದ್ದಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಸಾಲ ತೆಗೆದುಕೊಂಡ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನಮ್ಮ ತಂದೆ ತಮ್ಮ ಜೀವಿತ ಕಾಲದಲ್ಲಿ ನನಗೆ ಕೊಡಬೇಕಾದುದ್ದನ್ನು ಕೊಟ್ಟಿದ್ದರೂ ಸಹ 3ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ.ಡಿ.ಎಸ್.ಬಿ. ಪ್ರತಿವಾದಿ 5 ರಿಂದ 8 ರವರ ಪರ ವಕೀಲರಿಂದಃ</u>**

ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ